# ಶ್ರೀಮಾತೆಯವರೊಡನೆ ಮಾತುಕತೆ

### ಭಕ್ತೆ ಸರಯೂ ಬಾಲಾ ದೇವಿ
### ಅವರ ನೆನಪುಗಳು



ಶ್ರೀಮಾತೆ ತಮ್ಮ ಎಲೆಯಿಂದ ಪ್ರಸಾದವನ್ನು ನನಗೆ ಕೊಡುತ್ತಿದ್ದರು. ಕೈ ಚಾಚಿ ತೆಗೆದುಕೊಳ್ಳುವಾಗ ಅವರ ಕೈಗೆ ನನ್ನ ಕೈ ತಗಲಿತು. "ಅಮ್ಮ, ಕೈ ತೊಳೆದುಕೊಳ್ಳಿರಿ" ಎಂದೆ. ಸ್ವಲ್ಪ ನೀರನ್ನು ಕೈಗೆ ತೆಗೆದುಕೊಂಡು "ಸರಿ ತಾನೆ" ಎಂದರು. ಈ ಸಮಯಕ್ಕೆ ನಳಿನಿ ಬಂದಳು. ಯಾವ ಕಾರಣಕ್ಕೋ ಮೊದಲೇ ಕೋಪಗೊಂಡಿದ್ದಾಳೆ. ತಿರಸ್ಕಾರದಿಂದ ಶ್ರೀಮಾತೆ ಆಕೆಗೆ ಹೇಳುತ್ತಿದ್ದಾರೆ, "ಹೆಣ್ಣು ಹೆಂಗಸು ಅಷ್ಟು ಕೋಪಿಸಿಕೊಂಡರೆ ಹೇಗೆ? ಸಹನೆ ಬೇಕು. ಬಾಲ್ಯದಲ್ಲಿ ತಂದೆತಾಯಿಯ ಬಳಿ, ಯೌವ್ವನದಲ್ಲಿ ಪತಿಯ ಬಳಿ. ಅವರಿಗೆ ಇದು ಬಿಟ್ಟು ಬೇರೆ ದಾರಿ ಇಲ್ಲ. ಹೆಣ್ಣು ಜಾತಿಯೇ ಬಲು ಸೂಕ್ಷ್ಮ. ಒಂದು ಮಾತು ಸಾಕು, ಅವರನ್ನು ಅಸ್ಥಿರರನ್ನಾಗಿಸಲು. ಈ ಕಾಲದಲ್ಲಂತೂ ಮಾತಿಗೆ ಬೆಲೆಯೇ ಇಲ್ಲ. ಮಾತಾಡಿದರೆ ಆಗಿಹೋಯ್ತು. ಆದ್ದರಿಂದ ಕಷ್ಟವಾಗಲಿ ಸುಖವಾಗಲಿ ಸಹಿಸಿಕೊಂಡು ಬದುಕುವುದನ್ನು ಕಲಿಯಬೇಕು". ಸ್ವಲ್ಪ ಸಮಯದ ನಂತರ ರಾಧು ಬಂದು ಮೊಣಕಾಲ ಮೇಲೆ ಬಟ್ಟೆಯನ್ನು ಎಳೆದುಕೊಂಡು ಕುಳಿತಳು. ಕೋಪದಿಂದ ಶ್ರೀಮಾತೆ ಬಯ್ಯುತ್ತಾ ಹೇಳಿದರು "ಅದೇನು, ಮಂಡಿಯ ಮೇಲೆ ಹೆಣ್ಣು ಹುಡುಗಿ ಬಟ್ಟೆ ಎಳೆಯುವುದೆಂದರೆ?!"

ಚಂದ್ರಬಾಬುವಿನ ತಂಗಿ ಬಂದಿದ್ದಾಳೆ. ಮಾತುಕತೆಯ ಮಧ್ಯೆ ನನ್ನನ್ನು ಕೇಳಿದಳು, "ಶ್ರೀಮಾತೆಯ ಪತಿ ಜೀವಿಸಿದ್ದಾರೆ ತಾನೆ? ಇವರೆಲ್ಲಾ ಅವರ ಮಕ್ಕಳು ಎಂದೆನಿಸುತ್ತದೆ" ಎಂದು. ಆಗ ನಾನೆಂದೆ, "ಶ್ರೀರಾಮಕೃಷ್ಣರ ಬಗ್ಗೆ ಓದಿಲ್ಲವೇ? ಅವರ ಮುಖ್ಯ ಉಪದೇಶವೇ 'ಕಾಮಿನಿ ಕಾಂಚನ ತ್ಯಾಗ' " ಎಂದು. ಸ್ವಲ್ಪ ಗಡಿಬಿಡಿಗೊಂಡು ಆಕೆ ಹೇಳಿದಳು, "ಓ ನಾನೆಂದುಕೊಂಡಿದ್ದೆ ಇವರೆಲ್ಲಾ ಅವರ ಮಕ್ಕಳು ಎಂದು!"

ಶ್ರೀಮಾತೆ ದುರ್ಗಾಪೂಜೆಗಾಗಿ ಅಳಿಯಂದಿರಿಗೆ ಬಟ್ಟೆಯನ್ನು ಹಂಚುತ್ತಿದ್ದರು. ನನಗೆ ಬೇರೆ ಬೇರೆ ಗಂಟು ಕಟ್ಟಿ ಇಡಲು ಹೇಳಿದರು. ಬೇರೆ ಒಂದು ಪಂಚೆ ತೆಗೆದುಕೊಂಡು, "ಈಗ ಇದನ್ನು ಇಡು. ಪೂಜೆಯ ಸಮಯದಲ್ಲಿ ಗಣೇನ್ ಇದನ್ನು ಉಟ್ಟು ಮಠಕ್ಕೆ ಹೋಗಲಿ (ಬೇಲೂರು ಮಠ)" ಎಂದರು.

ಮಧ್ಯಾಹ್ನದ ಊಟದ ನಂತರ ಶ್ರೀಮಾತೆ ವಿಶ್ರಮಿಸುತ್ತಿದ್ದಾರೆ. ನಾನೂ ಸಹ ಹತ್ತಿರ ಕುಳಿತು ಗಾಳಿ ಬೀಸುತ್ತಿದ್ದೆ. "ಅಲ್ಲಿಂದ ಒಂದು ದಿಂಬು ತಂದು ಮಲಗಿಕೊ. ಈಗ ಸಾಕು ಗಾಳಿ ಬೀಸಿದ್ದು" ಎಂದರು. ಅವರ ದಿಂಬನ್ನು ಹೇಗೆ ಉಪಯೋಗಿಸಲಿ ಎಂದು ಭಾವಿಸಿ ರಾಧುವಿನ ಕೋಣೆಯಿಂದ ಒಂದನ್ನು ತಂದೆ. ಶ್ರೀಮಾತೆ ನಗುತ್ತಾ "ಅದು ಹುಚ್ಚಿಯದಮ್ಮಾ. ಈ ದಿಂಬನ್ನೇ ತೆಗೆದುಕೊ. ಅದರಲ್ಲಿ ದೋಷವಿಲ್ಲ" ಎಂದರು. ಮತ್ತೆ ರಾಧುವನ್ನು ಕೂಗುತ್ತಾ, "ರಾಧು, ಬಾ, ನಿನ್ನ ಅಕ್ಕನ ಬಳಿ ಮಲಗು" ಎಂದರು. ಚಂದ್ರಬಾಬುವಿನ ತಂಗಿಯ ಮಾತನ್ನು ಸ್ಮರಿಸುತ್ತಾ ಶ್ರೀಮಾತೆ "ನೀನು ಹೇಳಬಾರದಿತ್ತಾ, ಹೌದು, ಅವರ (ಶ್ರೀಮಾತೆ) ಪತಿ ಕೋಣೆಯಲ್ಲಿ (ಪೂಜಾ ಮಂದಿರ) ಕುಳಿತಿದ್ದಾರೆ ಮತ್ತು ನೀವೆಲ್ಲಾ ಅವರ ಮಕ್ಕಳು" ಎಂದು. ನಾನೆಂದೆ, "ಬ್ರಹ್ಮಾಂಡದಲ್ಲೆಲ್ಲ ಅವರ ಮಕ್ಕಳು ಅನಂತ". ಶ್ರೀಮಾತೆ ನಗಲಾರಂಭಿಸಿದರು. ನಂತರ ಹೇಳಿದರು, "ಎಷ್ಟು ಜನ ಎಷ್ಟು ಆಸೆ ಇಟ್ಟುಕೊಂಡು ಬರುತ್ತಾರಮ್ಮಾ! ಕೈಯಲ್ಲಿ ಒಂದು ಸೌತೆಕಾಯಿ ಹಿಡಿದುಕೊಂಡು, 'ಠಾಕೂರ್ ನೀನು ಇದನ್ನು ತೆಗೆದುಕೊ, ನನ್ನ ಇಷ್ಟಾರ್ಥ ಸಿದ್ಧಿಮಾಡು' ಎನ್ನುತ್ತಾರೆ. ಅಬ್ಬಾ, ಎಂತಹ ಕಾಮನೆಗಳು!"

ಶ್ರೀಮಾತೆ ಪಕ್ಕಕ್ಕೆ ತಿರುಗಿ ನಿದ್ರಿಸಲಾರಂಭಿಸಿದರು. ನನಗೂ ಅರೆನಿದ್ದೆ. ಎದ್ದಾಗ ಶ್ರೀಮಾತೆ ಗಾಳಿ ಬೀಸಿಕೊಳ್ಳುತ್ತಿರುವುದನ್ನು ಕಂಡೆ. ಕೊಂಚ ಸಮಯದ ನಂತರ ಶ್ರೀಮಾತೆ ಎದ್ದು ಕುಳಿತರು. ಪಕ್ಕದ ಕೋಣೆಯಲ್ಲಿ ಕೆಲವು ಸ್ತ್ರೀಭಕ್ತರು ಕುಳಿತಿದ್ದಾರೆ. ಅವರಲ್ಲಿ ಇಬ್ಬರು ಕಾವಿ ಬಟ್ಟೆ ತೊಟ್ಟಿದ್ದಾರೆ. ಅವರು ಶ್ರೀಮಾತೆಗೆ ನಮಸ್ಕರಿಸಿದರು. ಅವರ ಜೊತೆಯಲ್ಲಿದ್ದ ಚಿಕ್ಕ ಹುಡುಗ ಪ್ರಣಾಮ ಮಾಡಿದಾಗ, ಶ್ರೀಮಾತೆ ಪ್ರತಿಯಾಗಿ ನಮಸ್ಕರಿಸಿದರು. ಅವರು ತಂದಿದ್ದ ಸಿಹಿತಿಂಡಿಗಳನ್ನು ತೆಗೆದಿಡಲು ನನಗೆ ಹೇಳಿದರು. ಶ್ರೀಮಾತೆ ಕೈಕಾಲು ತೊಳೆದುಕೊಂಡು ಬರಲು ಹೊರಟರು. ಅಷ್ಟರಲ್ಲಿ ಅವರ ಪರಿಚಯ ಮಾಡಿಕೊಂಡೆ. ಅವರು ಕಾಲಿಘಾಟ್‌ನ ಶಿವನಾರಾಯಣ ಪರಮಹಂಸರ ಶಿಷ್ಯರು. ಸದ್ಯದಲ್ಲಿ ಅವರ ಗುರು ದಿನವಿಡೀ ಯಜ್ಞವೊಂದನ್ನು ಮಾಡುತ್ತಿದ್ದಾರೆ.

*(ಮುಂದುವರಿಯುವುದು)*